**2003 ರ ಕರ್ನಾಟಕ ಅಧಿನಿಯಮ ಸಂಖ್ಯೆ 28**

# ಕರ್ನಾಟಕ ಧನವಿನಿಯೋಗ (ಸಂಖ್ಯೆ 2) ಅಧಿನಿಯಮ, 2003

**ಪ್ರಕರಣಗಳ ಪಟ್ಟಿ**

**ಪ್ರಕರಣಗಳು**


1. ಸಂಕ್ಷಿಪ್ತ ಹೆಸರು
2. ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ 2003-2004ನೇ ಹಣಕಾಸು ವರ್ಷಕ್ಕಾಗಿ 29,091,88.80 ಲಕ್ಷ ರೂಪಾಯಿಗಳ ನೀಡಿಕೆ
3. ಧನವಿನಿಯೋಗ


## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

2003-2004 ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ರಾಜ್ಯದ ಸಂಚಿತ ನಿಧಿಯೊಳಗಿನಿಂದ ವಿನಿಯೋಗಿಸಲು ಭಾರತ ಸಂವಿಧಾನದ 204ನೇ ಅನುಚ್ಛೇದದ ಉಪಬಂಧಗಳಿಗನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

[2003ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 16]

(ಭಾರತ ಸಂವಿಧಾನದ 204ನೇ ಅನುಚ್ಛೇದ)

**2003 ರ ಕರ್ನಾಟಕ ಅಧಿನಿಯಮ ಸಂಖ್ಯೆ 28**

*(2003 ರ ಜುಲೈ ಮುವತ್ತೊಂದನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)*

## ಕರ್ನಾಟಕ ಧನವಿನಿಯೋಗ (ಸಂಖ್ಯೆ 2) ಅಧಿನಿಯಮ, 2003

*(2003 ರ ಜುಲೈ ಮೂವತ್ತನೇ ದಿನಾಂಕದಂದು ಕರ್ನಾಟಕ ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ)*

2003-2004 ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಕೆಲವು ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡಲು ಒಂದು ಅಧಿನಿಯಮ.

2003-2004 ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಆ ಪೈಕಿಯಿಂದ ಕೆಲವು ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗಲಿ, ಎಂದರೆ.-

1. **ಸಂಕ್ಷಿಪ್ತ ಹೆಸರು.-** ಈ ಅಧಿನಿಯಮವನ್ನು ಕರ್ನಾಟಕ ಧನವಿನಿಯೋಗ (ಸಂಖ್ಯೆ. 2) ಅಧಿನಿಯಮ, 2003 ಎಂದು ಕರೆಯತಕ್ಕದ್ದು.

2. **ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ 2003-2004ನೇ ಹಣಕಾಸು ವರ್ಷಕ್ಕಾಗಿ 29,091,88.80 ಲಕ್ಷ ರೂಪಾಯಿಗಳ ನೀಡಿಕೆ.-** ಅನುಸೂಚಿಯ 2ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ಸೇವೆಗಳ ಸಂಬಂಧದಲ್ಲಿ, 2003-2004 ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ಅನುಸೂಚಿಯ 5ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾಗಿರುವ **ಇಪ್ಪತ್ತೊಂಭತ್ತು ಸಾವಿರದ ತೊಂಬತ್ತೊಂದು ಕೋಟಿ ಎಂಬತ್ತೆಂಟು ಲಕ್ಷದ ಎಂಬತ್ತು ಸಾವಿರ ರೂಪಾಯಿಗಳಿಗೆ** ಮೀರದಷ್ಟು ಮೊಬಲಗನ್ನು ಮಾತ್ರ ಕರ್ನಾಟಕ ರಾಜ್ಯ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡತಕ್ಕದು ಮತ್ತು ಉಪಯೋಗಿಸತಕ್ಕದ್ದು.

3. **ಧನವಿನಿಯೋಗ.-** ಈ ಅಧಿನಿಯಮದ ಮೂಲಕ, ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡಲು ಮತ್ತು ಉಪಯೋಗಿಸಲು ಅಧಿಕಾರ ನೀಡಲಾದ ಮೊತ್ತಗಳನ್ನು ಸದರಿ ವರ್ಷಕ್ಕೆ ಸಂಬಂಧಪಟ್ಟಂತೆ ಅನುಸೂಚಿಯಲ್ಲಿ ತಿಳಿಸಲಾದ ಸೇವೆಗಳು ಮತ್ತು ಉದ್ದೇಶಗಳಿಗಾಗಿ ವಿನಿಯೋಗಿಸತಕ್ಕದ್ದು.

---

ಕರ್ನಾಟಕ ರಾಜ್ಯ ಪತ್ರದ ಭಾಗ IVಎ ವಿಶೇಷ ಪತ್ರಿಕೆ ಸಂಖ್ಯೆ: 880 ದಿನಾಂಕ: 31.7.2003 ರಲ್ಲಿ ಪ್ರಕಟಿತ
ಕಡತ ಸಂಖ್ಯೆ: ಸಂವ್ಯಶಾಇ 44 ಶಾಸನ 2003

**ಅನುಸೂಚಿ**

**(2 ಮತ್ತು 3ನೇ ಪ್ರಕರಣಗಳನ್ನು ನೋಡಿ)**

(ರೂ. ಲಕ್ಷಗಳಲ್ಲಿ)

| ಬೇಡಿಕೆ ಸಂಖ್ಯೆ | ಸೇವೆಗಳು ಮತ್ತು ಉದ್ದೇಶಗಳು | | ಮೀರದ ಮೊಬಲಗು | | ಒಟ್ಟು |
|---|---|---|---|---|---|
| | | | ವಿಧಾನ ಸಭೆಯಿಂದ ಪುರಸ್ಕೃತ ವಾದುದನ್ನು | ಸಂಚಿತ ನಿಧಿಯಿಂದ ಪ್ರಭೃತ ವಾದುದನ್ನು | |
| 1 | 2 | | 3 | 4 | 5 |
| 1 | ಕೃಷಿ ಮತ್ತು ತೋಟಗಾರಿಕೆ | ರಾಜಸ್ವ<br>ಬಂಡವಾಳ | 72,140.15<br>30.00 | 38.33<br>- | 72,178.48<br>30.00 |
| 2 | ಪಶು ಸಂಗೋಪನೆ ಮತ್ತು ಮೀನುಗಾರಿಕೆ | ರಾಜಸ್ವ<br>ಬಂಡವಾಳ | 18,134.43<br>340.00 | 7.50<br>- | 18141.93<br>340.00 |
| 3 | ಆರ್ಥಿಕ | ರಾಜಸ್ವ<br>ಬಂಡವಾಳ | 2,85,977.34<br>1218.75 | 466.45<br>- | 2,86,443.79<br>1218.75 |
| 4 | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ | ರಾಜಸ್ವ<br>ಬಂಡವಾಳ | 12,523.53<br>- | 5,731.68<br>- | 18,255.21<br>- |
| 5 | ಒಳಾಡಳಿತ ಮತ್ತು ಸಾರಿಗೆ | ರಾಜಸ್ವ<br>ಬಂಡವಾಳ | 1,12,546.33<br>1690.00 | -<br>- | 1,12,546.33<br>1690.00 |
| 6 | ಮೂಲಭೂತ ಸೌಕರ್ಯ | ರಾಜಸ್ವ<br>ಬಂಡವಾಳ | 50.00<br>17,950.00 | -<br>- | 50.00<br>17,950.00 |
| 7 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ | ರಾಜಸ್ವ<br>ಬಂಡವಾಳ | 93,633.94<br>24,326.00 | -<br>- | 93,633.94<br>24,326.00 |
| 8 | ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ | ರಾಜಸ್ವ<br>ಬಂಡವಾಳ | 34,138.96<br>810.00 | 1401.48<br>- | 35,540.44<br>810.00 |

(ರೂ. ಲಕ್ಷಗಳಲ್ಲಿ)

| | | | | | |
|---|---|---|---|---|---|
| 9 | ಸಹಕಾರ | ರಾಜಸ್ವ<br>ಬಂಡವಾಳ | 9,162.93<br>790.15 | -<br>- | 9,162.93<br>790.15 |
| 10 | ಸಮಾಜ ಕಲ್ಯಾಣ | ರಾಜಸ್ವ<br>ಬಂಡವಾಳ | 54,679.20<br>8,989.00 | -<br>- | 54,679.20<br>8,989.00 |
| 11 | ಮಹಿಳಾ ಮತ್ತು ಮಕ್ಕಳಾಭಿವೃದ್ಧಿ | ರಾಜಸ್ವ<br>ಬಂಡವಾಳ | 34,596.06<br>65.00 | -<br>- | 34,596.06<br>65.00 |
| 12 | ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು | ರಾಜಸ್ವ<br>ಬಂಡವಾಳ | 7,122.34<br>- | -<br>- | 7,122.34<br>- |
| 13 | ಆಹಾರ ಮತ್ತು ನಾಗರೀಕ ಸರಬರಾಜು | ರಾಜಸ್ವ<br>ಬಂಡವಾಳ | 20,064.96<br>100.00 | 2.00<br>- | 20,066.96<br>100.00 |
| 14 | ಕಂದಾಯ | ರಾಜಸ್ವ<br>ಬಂಡವಾಳ | 62,275.91<br>0.65 | 127.70<br>- | 62,403.61<br>0.65 |
| 15 | ಮಾಹಿತಿ ತಂತ್ರಜ್ಞಾನ | ರಾಜಸ್ವ<br>ಬಂಡವಾಳ | 353.00<br>766.00 | -<br>- | 353.00<br>766.00 |
| 16 | ವಸತಿ | ರಾಜಸ್ವ<br>ಬಂಡವಾಳ | 14638.86<br>5.00 | -<br>- | 14638.86<br>5.00 |
| 17 | ಶಿಕ್ಷಣ | ರಾಜಸ್ವ<br>ಬಂಡವಾಳ | 3,96,620.29<br>460.00 | -<br>- | 3,96,620.29<br>460.00 |
| 18 | ವಾಣಿಜ್ಯ ಮತ್ತು ಕೈಗಾರಿಕಾ | ರಾಜಸ್ವ<br>ಬಂಡವಾಳ | 57,056.51<br>12,121.14 | 0.25<br>- | 57,056.76<br>12,121.14 |
| 19 | ನಗರಾಭಿವೃದ್ಧಿ | ರಾಜಸ್ವ<br>ಬಂಡವಾಳ | 135,502.13<br>28,567.00 | -<br>- | 135,502.13<br>28,567.00 |

(ರೂ. ಲಕ್ಷಗಳಲ್ಲಿ)

| | | | | | |
|---|---|---|---|---|---|
| 20 | ಲೋಕೋಪಯೋಗಿ | ರಾಜಸ್ವ<br>ಬಂಡವಾಳ | 66,392.46<br>1,12,692.50 | 10.00<br>11.00 | 66,402.46<br>1,12,703.50 |
| 21 | ಜಲಸಂಪನ್ಮೂಲ | ರಾಜಸ್ವ<br>ಬಂಡವಾಳ | 19,816.14<br>2,17,909.95 | -<br>24.66 | 19,816.14<br>2,17,934.61 |
| 22 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು | ರಾಜಸ್ವ<br>ಬಂಡವಾಳ | 1,01,000.72<br>2940.00 | 0.39<br>- | 1,01,001.11<br>2940.00 |
| 23 | ಕಾರ್ಮಿಕ | ರಾಜಸ್ವ<br>ಬಂಡವಾಳ | 13,928.59<br>- | -<br>- | 13,928.59<br>- |
| 24 | ಇಂಧನ | ರಾಜಸ್ವ<br>ಬಂಡವಾಳ | 2,14,570.88<br>5,740.00 | 320.50<br>- | 2,14,891.38<br>5,740.00 |
| 25 | ಕನ್ನಡ ಮತ್ತು ಸಂಸ್ಕೃತಿ | ರಾಜಸ್ವ<br>ಬಂಡವಾಳ | 3,965.51<br>160.00 | -<br>- | 3,965.51<br>160.00 |
| 26 | ಯೋಜನೆ, ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ | ರಾಜಸ್ವ<br>ಬಂಡವಾಳ | 2,679.12<br>- | -<br>- | 2,679.12<br>- |
| 27 | ಕಾನೂನು | ರಾಜಸ್ವ<br>ಬಂಡವಾಳ | 14,140.55<br>- | -<br>- | 14,140.55<br>- |
| 28 | ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ | ರಾಜಸ್ವ<br>ಬಂಡವಾಳ | 3,251.58<br>- | 109.40<br>- | 3,360.98<br>- |
| 29 | ಋಣ-ಮೇಲುಸ್ತುವಾರಿ | ರಾಜಸ್ವ<br>ಬಂಡವಾಳ | -<br>- | 3,63,058.26<br>2,39,245.64 | 3,63,058.26<br>2,39,245.64 |
| | | **ಒಟ್ಟು** | **22,98,633.56** | **6,10,555.24** | **29,09,188.80** |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**ಮ.ರಾ. ಹೆಗಡೆ**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು ಶಾಸನ
ರಚನೆ ಇಲಾಖೆ.